O.S 376/2009
DW-2

ಸಾಕ್ಷಿದಾರರನ್ನು ಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

**ದಿನಾಂಕಃ 12-03-2019.**

*ಮುಂದುವರೆದ ಮುಖ್ಯ ವಿಚಾರಣೆ ಶ್ರೀ ಜಿ.ಎಸ್.ಜಿ.ವಕೀಲರಿಂದ*

ನನ್ನ ಪರ ಈ ಕೆಳಕಂಡ ದಾಖಲೆಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ನಿಶಾನೆಗಳಾಗಿ ಗುರುತಿಸಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ದಿಃ25-6-1994 ರ ಪಾಲುಪಟ್ಟಿಯನ್ನು ನಿಡಿ-12 ಎಂದು.ಹಾಗೂ ಸಾಕ್ಷಿದಾರರ ಸಹಿಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಡಿ-12(ಎ),(ಬಿ),(ಸಿ),(ಡಿ),(ಇ),(ಎಫ್) ಹಾಗೂ ತನ್ನ ತಂದೆಯ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ-12(ಜಿ) ಹಾಗೂ ತನ್ನ ತಾಯಿಯ ಸಹಿಯನ್ನು ನಿಡಿ-12(ಎಚ್) ಹಾಗೂ ಕೃಷ್ಣೇಗೌಡರ ಸಹಿಯನ್ನು ನೋಡಿ ಗುರುತಿಸಿದ್ದು ನಿಡಿ-12(ಐ) ಎಂದು ಹಾಗೂ ತನ್ನ ಸಹಿಯನ್ನು ನೋಡಿ ಗುರತಿಸಿದ್ದು ನಿಡಿ-12(ಜೆ) ಹಾಗೂ ಬಿಕ್ಲಂದಾರರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ-12(ಕೆ) ಎಂದು ಗುರುತಿಸಲಾಯಿತು.

ದಿಃ25-06-1994 ರ ಕೃಷ್ಣೇಗೌಡರ ಪಾಲುಪಟ್ಟಿಯನ್ನು ಹಾಜರುಪಡಿಸಿದ್ದು ನಿಡಿ-13(ಎ),(ಬಿ),(ಸಿ),(ಡಿ),(ಇ),(ಎಫ್) ಹಾಗೂ ತನ್ನ ತಂದೆಯ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ-13(ಜಿ) ಹಾಗೂ ತನ್ನ ತಾಯಿಯ ಸಹಿಯನ್ನು ನಿಡಿ-13(ಎಚ್) ಹಾಗೂ ಕೃಷ್ಣೇಗೌಡರ ಸಹಿಯನ್ನು ನೋಡಿ ಗುರುತಿಸಿದ್ದು ನಿಡಿ-13(ಐ) ಎಂದು ಹಾಗೂ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ನಿಡಿ-13(ಜೆ) ಹಾಗೂ ಬಿಕ್ಲಂದಾರರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ-13(ಕೆ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃಶ್ರೀ ಎನ್.ಜಿ.ವಕೀಲರಿಂದ

ನಾನು 7 ನೇ ತರಗತಿಯವರಗೆ ವ್ಯಾಸಂಗ ಮಾಡಿದ್ದೇನೆ.ನ್ನ ತಂದೆ ತಾಯಿ ಜೀವಂತ ಸಮಯದಲ್ಲಿ ನಮ್ಮ ಕುಟುಂದವ ವ್ಯವಹಾರ ಮಾಡುತ್ತಿದ್ದರು ಹಾಗೂ ನನ್ನ ತಂದೆ ತಾಯಿ ಜೀವಂತ ಇದ್ದಾಗಲೇ ಬೇರೆಯಾಗಿದ್ದೇನೆ.ನಾನು ನಮ್ಮ ಕುಟುಂಬದ ವ್ಯವಹಾರ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವ ಐಟಂ ನಂಬರ್ 3 ರ ಸ್ವತ್ತನ್ನು ನನ್ನ ತಂದೆ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ.1983 ರಿಂದ ನಾನು ಸಾಗುವಳಿ ಮಾಡುತ್ತಿದ್ದೇನೆ.ನನ್ನ ಅಕ್ಕ ಮದುವೆಯಾಗುವ ಕಾಲಕ್ಕೆ ನಾನು 9 ವರ್ಷದ ಹುಡುಗ.

ನನ್ನ ತಾಯಿ ಜಯಮ್ಮ ಯಾವುದೇ ನೌಕರಿಯಲ್ಲಿ ಇರಲಿಲ್ಲ. ನನ್ನ ತಾಯಿಯ ಯೋಗಕ್ಷೇಮವನ್ನು ನನ್ನ ತಂದೆ ನೋಡಿಕೊಳ್ಳುತ್ತಿದ್ದರು. ನನ್ನ ತಾಯಿ ಹೊಗೆಸೊಪ್ಪು ಮತ್ತು ಕಡ್ಡಿಪುಡಿ ವ್ಯಾಪಾರ ಮಾಡುತ್ತಿದ್ದರು. ನಾನು ಲಿಖಿತ ಹೇಳಿಕೆಯಲ್ಲಿ ನಾನು ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದೆ ಎಂದು ತಿಳಿಸಿದ್ದೇನೆ.

ಐಟಂ ನಂರ್ 4 ರ ಸ್ವತ್ತನ್ನು ನನ್ನ ತಂದೆ ಪಿತ್ರಾರ್ಜಿತ ಆಸ್ತಿಗಳಿಂದ ಬಂದ ಆದಾಯದಿಂದ ನನ್ನ ತಾಯಿಯ ಹೆಸರಿಗೆ ಕ್ರಯಕ್ಕೆ ಪಡೆದಿದ್ದಾರೆ ಎಂದರೆ ಸರಿ. ಐಟಂ ನಂಬರ್ 1 ಮತ್ತು 2 ರಲ್ಲಿ ಸುಮಾರು 290 ತೆಂಗಿನ ಮರಗಳಿವೆ. ಐಟಂ ನಂಬರ್ 1 ಮತ್ತು 2 ರಲ್ಲಿ 2 ಕೊಳವೆ ಬಾವಿ ಇದೆ ಎಂದರೆ ಸರಿ.

ವರ್ಷಕ್ಕೆ 10-12 ಸಾವಿರ ತೆಂಗಿನಕಾಯಿ ಬರುತ್ತದೆ. ಹಾಗೂ ಸದರಿ ಜಮೀನುಗಳಲ್ಲಿ ಮೆಕ್ಕೆ ಜೋಳ ಮತ್ತು ಆಲೂಗೆಡ್ಡೆ ಬೆಳೆಯುತ್ತಿದ್ದೇವೆ ಎಂದರೆ ಸರಿಯಲ್ಲ. ನಮ್ಮ ಕುಟುಂಬಕ್ಕೆ ವಾರ್ಷಿಕ್ಕೆ 2-3 ಲಕ್ಷ ರೂಪಾಯಿ ಆದಾಯ ಇತ್ತು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದ ಸುಮಾರು 30-40 ಸಾವಿರ ಇತ್ತು ಎಂದು ನುಡಿಯುತ್ತಾರೆ. ಸಿ. ಷೆಡ್ಯೂಲ್ ಮನೆಗಳಲ್ಲಿ 2 ಮನೆಯನ್ನು ಬಾಡಿಗೆಗೆ ನೀಡಿದ್ದೇವೆ ಎಂದರೆ ಸರಿಯಲ್ಲ. ಐಟಂ ನಂಬರ್ 4 ರ ಸ್ವತ್ತನ್ನು ದಿಃ15-07-2005 ರಂದು 6 ನೇ ಪ್ರತಿವಾದಿಗೆ ಮಾರಟ ಮಾಡುವ ದರ್ದು ನಮ್ಮ ಕುಟುಂಬಕ್ಕೆ ಇರಲ್ಲಿಲ್ಲ ಎಂದರೆ ಸರಿಯಲ್ಲ.

ನಿಡಿ-12 ಕ್ಕೆ ನನ್ನ ಸಹೋದರಿಯವರು ಪಕ್ಷಗಾರರಲ್ಲ ಎಂದರೆ ಸರಿ. ವಾದಿಗೆ ನಮ್ಮ ಕುಟುಂಬದ ಸ್ವತ್ತುಗಳಲ್ಲಿ ಯಾವುದೇ ಭಾಗಾಂಶ ನೀಡಿಲ್ಲ ಎಂದರೆ ಸರಿ. ನಿಡಿ-12 ಮತ್ತು 13 ನ್ನು ನೋಂದಾಣಿ ಮಾಡಿಸಲು ಯಾವುದೇ ತೊಂದರೆ ಇರಲಿಲ್ಲ. ನಿಡಿ-12 ಮತ್ತು 13 ರಲ್ಲಿ ಖಾತೆ ನಂಬರ್ ಮತ್ತು ಎ. ಆರ್ ನಂಬರ್ ಬಾಲ್ ಪೆನ್ ಇಂದ ಬರೆಯಲಾಗಿದೆ ಎಂದರೆ ಸರಿ. ನಿಡಿ-12 ಮತ್ತು 13 ನ್ನು ನಾನು ಮತ್ತು ನನ್ನ ಅಣ್ಣ ಹಾಗೂ ಸಾಕ್ಷಿದಾರರು ವಾದಿಗೆ ಮೋಸ ಮಾಡುವ ಸಲುವಾಗಿ ಸೃಷ್ಟಿಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ.

ನಿಡಿ-12 ಮತ್ತು 13 ನ್ನು ನನ್ನ ತಂದೆ ಬರೆಸಿರುತ್ತಾರೆ. ನಿಡಿ-12 ಮತ್ತು 13 ನ್ನು ನನ್ನ ತಂದೆ ತಾಲ್ಲೂಕು ಕಚೇರಿಯಲ್ಲಿ ಬರೆಸಿದ್ದಾರೆ. ನಿಡಿ-12 ಮತ್ತು 13 ನ್ನು ಬರೆಸುವಾಗ ನಾನು ಇರಲ್ಲಿಲ್ಲ. ಸಾಕ್ಷಿದಾರರನ್ನು ನನ್ನ ತಂದೆ ಕರೆ ತಂದಿದ್ದರು. 1983 ರಲ್ಲಿ ನಾನು ಕಾರು ಚಾಲಕನಾಗಿದ್ದೆ. ಐಟಂ ನಂಬರ್ 3 ರ ಸ್ವತ್ತನ್ನು ನಮ್ಮ ಒಟ್ಟು ಕುಟುಂಬದ ಪರವಾಗಿ ನನಗೆ ಮಂಜೂರು ಮಾಡಿದ್ದಾರೆ ಎಂದರೆ

ಸರಿಯಲ್ಲ.ಸಾಕ್ಷಿಯು ಮುಂದುವರೆದು ನಾನು ಉಳಿಮೆ ಮಾಡುತ್ತಿದ್ದರಿಂದ ನನ್ನ ಹೆಸರಿಗೆ ಮಂಜೂರು ಮಾಡಿದ್ದಾರೆ ಎಂದು ನುಡಿಯುತ್ತಾರೆ.

ಐಟಂ ನಂಬರ್ 1 ಮತ್ತು 2 ಹಾಗೂ ಬಿ ಷೆಡ್ಯೂಲ್ ಮತ್ತು ಸಿ.ಷೆಡ್ಯೂಲ್ ಸ್ವತ್ತುಗಳು ನನ್ನ ತಂದೆಯ ಸ್ವಯಾರ್ಜಿತ ಸ್ವತ್ತುಗಳು ಎಂದರೆ ಸರಿ.ದಾವ ಸ್ವತ್ತಿನ ಸಿ.ಷೆಡೂಲ್ ಮನೆಯನ್ನು ನನ್ನ ತಂದೆ ತೀರಿಕೊಂಡ ನಂತರ ನನ್ನ ಹಾಗೂ ನನ್ನ ಅಣ್ಣನ ಹೆಸರಿಗೆ ಬದಲಾಯಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ ಸಾಕ್ಷಿಯು ಮುಂದುವರೆದು ನನ್ನ ತಂದೆ ಜೀವಂತವಿದ್ದಾಗಲೇ ತೀರಿಕೊಂಡರು ಎಂದು ನುಡಿಯುತ್ತಾರೆ.ವಾದಿ ದಾವ ಸ್ವತ್ತುಗಳಲ್ಲಿ ಹಿಸ್ಸೆ ನೀಡಬೇಕೆಂದು ನನ್ನ ಮತ್ತು ನನ್ನ ಅಣ್ಣನನ್ನು ಕೇಳಿದ್ದರು ಎಂದರೆ ಸರಿಯಲ್ಲ.ನಾನು ಮತ್ತು ನನ್ನ ಅಣ್ಣ ತಿರಸ್ಕಾರ ಮಾಡಿದ್ದೇವೆ ಎಂದರೆ ಸರಿಯಲ್ಲ.ವಾದಿಗೆ ಮೋಸ ಮಾಡುವ ಉದ್ದೇಶದಿಂದ ನಾನು ಮತ್ತು ನನ್ನ ಅಣ್ಣ,ನನ್ನ ತಾಯಿ,ಐಟಂ ನಂಬರ್ 4 ಸ್ವತ್ತಿಗೆ ಸಂಬಂಧಿಸಿದಂತೆ ಸುಳ್ಳು ಕ್ರಯಪತ್ರ ಸೃಷ್ಟಿಮಾಡಿದ್ದೇನೆ ಎಂದರೆ ಸರಿಯಲ್ಲ ಐಟಂ ನಂಬರ್ 4 ರ ಸ್ವತ್ತಿನಲ್ಲಿ ನಾನು ಮತ್ತು ನನ್ನ ಅಣ್ಣ ಈಗಾಲು ಸ್ವಾಧೀನದಲ್ಲಿದ್ದೇವೆ ಎಂದರೆ ಸರಿಯಲ್ಲ.ಸಾಕ್ಷಿಯು ಮುಂದುವರೆದು 6 ನೇ ಪ್ರತಿವಾದಿಯ ಹೆಸರಿನಲ್ಲಿದೆ ಎಂದು ನುಡಿಯುತ್ತಾರೆ.ವಾದಿಯ ಭಾಗಾಂಶಕ್ಕೆ ಮೋಸ ಮಾಡುವ ಸಲುವಾಗಿ ಸುಳ್ಳು ತಕರಾರು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.ಈ ಕೇಸಿಗೋಸ್ಕರು ಸುಳ್ಳು ದಾಖಲೆಯನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು.</u>

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸ.ಇ.ಎ.ಒ.ಸ.ಮಾ,

*(ಎಸ್.ಚಿನ್ನಸ್ವಾಮಿ)*

ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಚನ್ನರಾಯಪಟ್ಟಣ

O.S 376/2009
DW-2